# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **214**

ಸದಸ್ಯರ ಹೆಸರು : **ಶ್ರೀಮತಿ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 14.02.2024

| | ಪ್ರಶ್ನೆ | ಉತ್ತರ |
|---|---|---|
| ಅ. | ಒಂದು ದೇಶದಲ್ಲಿ ಒಂದೇ ಮಾದರಿಯ ಏಕರೂಪ ಚಾಲನಾ ಪರವಾನಗಿ, ವಾಹನಗಳ ನೋಂದಣಿ ಪ್ರಮಾಣಪತ್ರ ಇರಬೇಕೆಂಬ ಕೇಂದ್ರ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯದ ಆದೇಶವು ರಾಜ್ಯದಲ್ಲಿ ಜಾರಿಯಲ್ಲಿದೆಯೇ ; | ಒಂದು ದೇಶದಲ್ಲಿ ಒಂದೇ ಮಾದರಿಯ ಏಕರೂಪ ಚಾಲನಾ ಪರವಾನಗಿ, ವಾಹನಗಳ ನೋಂದಣಿ ಪ್ರಮಾಣಪತ್ರ ಇರಬೇಕೆಂಬ ಕೇಂದ್ರ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯದ ಆದೇಶವು ರಾಜ್ಯದಲ್ಲಿ ಇಲ್ಲಿಯವರೆವಿಗೂ ಜಾರಿಯಾಗಿರುವುದಿಲ್ಲ. ಮುಂದಿನ New Smart Card Project (Printing of RC and DL documents) ನಲ್ಲಿ ಇದನ್ನು ಜಾರಿಗೊಳಿಸಲು ಕ್ರಮವಹಿಸಲಾಗುವುದು. |
| ಆ. | ರಾಜ್ಯದಲ್ಲಿ ಏಕರೂಪ ಚಾಲನಾ ಪರವಾನಗಿ ಮತ್ತು ನೋಂದಣಿ ಪ್ರಮಾಣಪತ್ರವನ್ನು ನೀಡಲು ಯಾವ ಕಂಪೆನಿಗಳಿಗೆ ಗುತ್ತಿಗೆಯನ್ನು ನೀಡಲಾಗಿದೆ; | ಅನ್ವಯಿಸುವುದಿಲ್ಲ. |
| ಇ. | ಯಾವ ಕಾಲಮಿತಿಯಲ್ಲಿ ಏಕರೂಪ ಚಾಲನಾ ಪರವಾನಗಿ ಸ್ಮಾರ್ಟ್ ಕಾರ್ಡ್ ಗಳನ್ನು ವಿತರಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ ; | ಅನ್ವಯಿಸುವುದಿಲ್ಲ. |
| ಈ. | ಇತ್ತೀಚೆಗೆ ರಾಜ್ಯದಲ್ಲಿ ನಕಲಿ ಚಾಲನಾ ಪರವಾನಗಿಯನ್ನು ಮಾಡಿಕೊಡುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದು, ಅಂತಹವರುಗಳ ವಿರುದ್ಧ ದಾಖಲಾದ ಪ್ರಕರಣಗಳು ಎಷ್ಟು; ಹಾಗೂ ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? | ನಕಲಿ ಚಾಲನಾ ಪರವಾನಗಿಯ ಪ್ರಕರಣಗಳು ಕೆಳಕಂಡಂತಿವೆ :-<br>1. ಕೆ.ಜಿ.ಎಫ್. ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ 2019ರಲ್ಲಿ ಒಂದು ಪ್ರಕರಣ ಕಂಡುಬಂದಿದ್ದು, ಸಂಬಂಧ ಪಟ್ಟ ಅಧಿಕಾರಿ/ ಸಿಬ್ಬಂದಿಗಳಿಗೆ ನೋಟೀಸ್ ನೀಡಿದ್ದು ಕ್ರಮ ಜಾರಿಯಲ್ಲಿದೆ.<br>2. ಮೈಸೂರು (ಪಶ್ಚಿಮ) ಪ್ರಾದೇಶಿಕ ಸಾರಿಗೆ ಕಛೇರಿಗೆ ಸಂಬಂಧಿಸಿದಂತೆ, ಮೈಸೂರಿನ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ.60/2022 ದಿ:29-11-2022 ದಾಖಲಾಗಿದ್ದು ಪ್ರಕರಣವು ಮುಕ್ತಾಯವಾಗಿರುತ್ತದೆ.<br>3. ಹಾಸನ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಒಂದು ಪ್ರಕರಣ ದಾಖಲಾಗಿದ್ದು, ಕಛೇರಿಯ ತಾಂತ್ರಿಕ ಸಲಹೆಗಾರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಅವರನ್ನು ಕಂಪೆನಿಯ ಕೆಲಸದಿಂದ ವಜಾ ಮಾಡಲಾಗಿರುತ್ತದೆ. |

**ಟಿಡಿ 03 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.